O.S .No. 58/2021

ಪಿ.ಡಬ್ಲ್ಯೂ-1

ದಿನಾಂಕ: 19.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಜಿ.ಆರ್. ವಕೀಲರಿಂದಃ

ದಾವೆಯನ್ನು ಆಸ್ತಿಗಾಗಿ ಹೂಡಲಾಗಿದೆ. ಆಸ್ತಿಯಲ್ಲಿ ಭಾಗ ಕೋರಿದ್ದು, ಪ್ರತಿವಾದಿಗೆ ಭಾಗ ಕೋರಿ ನೋಟಿಸ್ ನೀಡಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಪ್ರತಿವಾದಿಯನ್ನು ಹೊರತುಪಡಿಸಿ ನಿಮ್ಮ ತಂದೆ ಮನೆಯಲ್ಲಿ ಇನ್ಯಾರು ವಾಸ ಇದ್ದಾರೆಂದರೆ ಸಾಕ್ಷಿ ನನ್ನ ತಾಯಿ ಸುಶೀಲ, ತಂಗಿಯರಾದ ರಶ್ಮಿ ಮತ್ತು ಬಿಂದು, ತಮ್ಮ ಮದನಕುಮಾರ ಎಂದು ಹೇಳುತ್ತಾರೆ. ನನ್ನ ತಂದೆಗೆ ಮಾತ್ರ ಭಾಗ ಕೋರಿ ತಿಳುವಳಿಕೆ ಪತ್ರ ನೀಡಿರುತ್ತೇನೆ.

ನಾನು ದ್ವಿತಿಯ ಪಿ.ಯು.ಸಿ ವರೆಗೂ ವಿದ್ಯಾಭ್ಯಾಸ ಮಾಡಿದ್ದು, ಕನ್ನಡ ಓದಲು, ಬರೆಯಲು ಬರುತ್ತದೆ. ನಿಪಿ-1 ಹಕ್ಕು ಖುಲಾಸೆ ಪತ್ರವಾಗಿರುತ್ತದೆ. ನಿಪಿ-1 ರಲ್ಲಿ ಹಕ್ಕು ಖುಲಾಸೆ ಮಾಡುವವರಲ್ಲಿ ನನ್ನ ಸಹಿ ಇದೆ. ಹಕ್ಕು ಖುಲಾಸೆ ಮಾಡಿಸಿಕೊಂಡವರಲ್ಲಿ ನನ್ನ ತಂದೆಯ ಸಹಿ ಇದೆ. ನಿಪಿ-1 ನ್ನು ಮಾಡಿದ 5 ವರ್ಷದ ನಂತರ ದಾವೆಯನ್ನು ಹೂಡಿರುತ್ತೇನೆ. ನಿಪಿ-1 ರಲ್ಲಿ ನಿಮ್ಮ ತಂದೆಯ ಚರ ಮತ್ತು ಸ್ಥಿರ ಆಸ್ತಿಗಳ ಮೇಲೆ ನಿಮಗೆ ಯಾವುದೇ ಹಕ್ಕು ಇಲ್ಲ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಹಕ್ಕು ಖುಲಾಸೆ ಬರೆದುಕೊಟ್ಟಿಲ್ಲ ಎಂದು ಹೇಳುತ್ತಾರೆ.

ನಿಪಿ-1 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದವರು ನಿಮ್ಮ ಊರಿನವರು ಹಾಗೂ ನಿಮಗೆ ಗೊತ್ತಿರುವವರು ಎಂದರೆ ಸರಿ. ದಿಃ 06.06.2016 ರಲ್ಲಿ ನಿನ್ನ ಗಂಡನೊಂದಿಗೆ, ಪ್ರೀತಿ ಮಾಡಿ ಮನೆ ಬಿಟ್ಟು ಹೋಗಿರುತ್ತೀರಿ ಎಂದರೆ ಸರಿ. ದಿಃ 07.06.2016 ರಂದು ನಿಮ್ಮ ತಾತ ಠಾಣೆಗೆ ಮಿಸ್ಸಿಂಗ್ ದೂರು ನೀಡಿದ್ದರು ಎಂದರೆ ಸರಿ. ನೀವು ದಿಃ 10.06.2016 ರಂದು ನೀವು ನಿಮ್ಮ ಗಂಡನೊಂದಿಗೆ ದಿಃ 06.06.2016 ರಂದು ಮದುವೆಯಾಗಿರುವುದಾಗಿ ಠಾಣೆಗೆ ಹಾಜರಾಗಿ ಹೇಳಿಕೆ ನೀಡಿರುತ್ತೀರಿ ಎಂದರೆ ಸರಿ. ಠಾಣೆಯಲ್ಲಿ ಪಂಚಾಯಿತಿ ಮಾಡಿ, ನೀವು ಪ್ರಾಪ್ತ ವಯಸ್ಕರಾಗಿರುವುದರಿಂದ ನಿಮ್ಮ ಗಂಡನೊಂದಿಗೆ ಹೋಗಬಹುದು ಎಂದು ತೀರ್ಮಾನ ಮಾಡಲಾಯಿತು ಎಂದರೆ ಸರಿ. ದಿಃ 06.06.2016 ರಿಂದ ಇಂದಿನವರೆಗೂ ನೀವು ನಿಮ್ಮ ಗಂಡನ ಮನೆಯಲ್ಲೇ ವಾಸ ಇದ್ದೀರಿ ಎಂದರೆ ಸರಿ.

ದಿಃ 06.06.2016 ರಿಂದ ಇಲ್ಲಿಯವರೆಗೂ ನೀವು ಎಲ್ಲಿಗಾದರೂ ಹೊರಗೆ ಹೋಗಬೇಕಾದರೆ ಗಂಡನೊಂದಿಗೆ ಹೋಗುತ್ತೀರಿ ಎಂದರೆ ಸರಿ. ದಿಃ 13.06.2016 ರಂದು ನೀವು

ನಿಮ್ಮ ಗಂಡನೊಂದಿಗೆ ಉಪನೊಂದಣಾ ಕಚೇರಿಗೆ ಬಂದಿರುತ್ತೀರಿ ಎಂದರೆ ಸರಿಯಲ್ಲ. ದಿಃ13.06.2016 ರಂತೆ ನಿಪಿ-1 ಕ್ಕೆ ಓದಿ, ಕೇಳಿ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಉಪನೊಂದಣಾ ಕಚೇರಿಯಲ್ಲಿ ನೊಂದಣಾ ಮಾಡುವ ಮುಂಚಿತವಾಗಿ, ಉಪನೊಂದಣಾ ಅಧಿಕಾರಿ ದಾಖಲಾತಿಯಲ್ಲಿರುವ ವಿಚಾರವನ್ನು ಓದಿ, ಕೇಳಿ, ತಿಳಿದುಕೊಂಡು ಸಹಿ ಮಾಡಿದ್ದೀರಾ ಎಂದು ಕೇಳುತ್ತಾರೆಂಬ ವಿಚಾರ ನಿಮಗೆ ಗೊತ್ತು ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಿಃ13.06.2016 ರಂದು ನೀವು ಉಪನೊಂದಣಾ ಕಚೇರಿಗೆ ಎಷ್ಟು ಗಂಟೆಗೆ ಬಂದಿರಿ, ಎಷ್ಟು ಗಂಟೆವರೆಗೂ ಇದ್ದೀರಿ ಎಂದರೆ ಸಾಕ್ಷಿ 10.00 ಗಂಟೆಗೆ ಬಂದು, ಸಂಜೆ 3.00-4.00 ಗಂಟೆವರೆಗೂ ಇದ್ದೆ ಎಂದು ಹೇಳುತ್ತಾರೆ. ದಿಃ 13.06.2016 ರಂದು ನೀವು ಉಪನೊಂದಣಾ ಕಚೇರಿಯ ಉಪನೊಂದಣಾ ಅಧಿಕಾರಿ ಮುಂದೆಯಾಗಲೀ, ಪೊಲೀಸ್ ಠಾಣೆಗಾಗಲೀ, ವಕೀಲರ ಮುಖೇನ ನೋಟೀಸ್ ಕೊಟ್ಟಿಲ್ಲ ಎಂದರೆ ಸಾಕ್ಷಿ ನನಗೆ ದಾಖಲಾತಿಯನ್ನೇ ಕೈಗೆ ನೋಡಲು ಕೊಡಲಿಲ್ಲ ಎಂದು ಹೇಳುತ್ತಾರೆ.

ನಿಮ್ಮ ಗಂಡನ ಮನೆಯ ಹಿಂದೆ ನಿಮ್ಮ ತಂದೆಯ ಮನೆ ಎಂದರೆ ಸರಿ. ನಿಮ್ಮ ತಂದೆ-ತಾಯಿಯನ್ನಾಗಲೀ, ನಿಮ್ಮ ಮಾವನ ಮುಖೇನವಾಗಲೀ ಆಸ್ತಿಯಲ್ಲಿ ಭಾಗ ಕೊಡುವಂತೆ ಪಂಚಾಯಿತಿ ಮಾಡಿದ ಬಗ್ಗೆ ದಾಖಲಾತಿ ಇಲ್ಲ ಎಂದರೆ ಸಾಕ್ಷಿ ದಾಖಲಾತಿ ಇಲ್ಲ, ಕೇಳಿದ್ದೆ ಎಂದು ಹೇಳುತ್ತಾರೆ. ನಿಪಿ-1 ನ್ನು ನೀವು ಓದಿ, ತಿಳಿದುಕೊಂಡೇ ಸಹಿ ಮಾಡಿದ್ದು, ಬರೆದುಕೊಟ್ಟು 5 ವರ್ಷಗಳ ನಂತರ ನ್ಯಾಯಾಲಯದ ಮುಂದೆ ನಿಪಿ-1 ನ್ನು ಪ್ರಶ್ನೆ ಮಾಡಲು ಕಾನೂನಿನಲ್ಲಿ ಆಸ್ಪದ ಇಲ್ಲ ಎಂದರೆ ಸರಿಯಲ್ಲ, ಸಾಕ್ಷಿ ನಾನು ಓದಿ ಸಹಿ ಮಾಡಿಲ್ಲ ಎಂದು ಹೇಳುತ್ತಾರೆ.

<u>ಮರುವಿಚಾರಣೆ ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.